ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ವಿಕಾಸನ ಸಂಸ್ಥೆಯಿಂದ ಪಾಂಡವಪುರ ತಾಲ್ಲೂಕಿನಲ್ಲಿ ಆಗಿರತಕ್ಕಂಥ ಕಾರ್ಯಕ್ರಮದ ಬಗ್ಗೆ ತಪಾಸಣೆ ಮಾಡಿ ಸತ್ಯಶೋಧನೆ ಮಾಡಿ, ವಾಸ್ತವಿಕವಾಗಿ ಅನ್ಯಾಯವನ್ನು ಕಂಡುಹಿಡಿದು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಅದನ್ನು ಮಾಡುತ್ತಾರೆ, ಶಿವಕುಮಾರ್‌ರವರು ಗೈರು ಹಾಜರಿದ್ದಾರೆ, ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ತಡೆಹಿಡಿಯಲಾದ ಪ್ರಶ್ನೆಯನ್ನು ಕೇಳುವುದು.

ಐಸಿಡಿಎಸ್ ಯೋಜನೆಯಡಿ ಅವ್ಯವಹಾರ

506 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಐಸಿಡಿಎಸ್ ಯೋಜನೆಯಡಿ ಅವ್ಯವಹಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ. *ಇದರ ತನಿಖೆಗೆ ನೇಮಿಸಿದ ಆಗವಾನೆರವರ ಏಕ ಸದಸ್ಯ ಸಮಿತಿ ವರದಿ ಸಲ್ಲಿಸಿದೆಯೆ?*

ಇ. *ಏಕ ಸದಸ್ಯ ಸಮತಿಯ ವರದಿಯ ಶಿಫಾರಸ್ಸುಗಳೇನು?*

ಈ. *ಇದನ್ನು ಪ್ರಕಟಗೊಳಿಸದರಿಲು ಕಾರಣಗಳೇನು?*

ಉ. *ಸಮಿತಿಯ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ. ಹೌದು.

ಆ. ಸಮಿತಿಯನ್ನು ನೇಮಕ ಮಾಡಿರುವುದಿಲ್ಲ. ಆದರೆ ಈ ಬಗ್ಗೆ ತನಿಖೆ ನಡೆಸಲು ಹಿರಿಯ ಐ.ಎ.ಎಸ್ ಅಧಿಕಾರಿ ಶ್ರೀ ಬಿ.ಎಸ್. ಆಗವಾನೆ ಇವರನ್ನು ನೇಮಕ ಮಾಡಲಾಗಿದ್ದು, ಅವರು ವರದಿ ಸಲ್ಲಿಸಿರುತ್ತಾರೆ.

ಇ. ಶ್ರೀ ಆಗವಾನೆ ವರದಿಯ ಶಿಫಾರಸ್ಸುಗಳು ಈ ರೀತಿ ಇದೆ:-

1. ನಂದಿ ಆಗ್ರೋ ಪ್ರೈವೆಟ್ ಲಿಮಿಟೆಡ್, ಕೋಲಾರ ಇವರಿಗೆ ನೀಡಲಾಗಿರುವ ಪಡಿತರ ಗೋಧಿ ಹಂಚಿಕೆಯನ್ನು ಹಿಂದಕ್ಕೆ ಪಡೆಯುವುದು.

2. ನಂದಿ ಆಗ್ರೋ, ಕೋಲಾರ ಇವರಿಗೆ ಹೆಚ್ಚಿಗೆ ನೀಡಲಾಗಿರುವ ಹಣವನ್ನು ವಸೂಲಿ ಮಾಡುವುದು.

3. ಐಸಿಡಿಎಸ್. ಯೋಜನೆಗಳಲ್ಲಿ ಖರೀದಿ ಮಾಡುವ ಆಹಾರ ಪದಾರ್ಥಗಳ ಬೆಲೆ ನಿಗಧಿಸುವ ಮತ್ತು ಖರೀದಿ ವಿಧಾನಗಳ ಬಗ್ಗೆ ವಿವರವಾದ ಪರಿಶೀಲನೆ ಮಾಡುವುದು.

4. ಖರೀದಿ ವಿಧಾನಗಳ ಹಾಗೂ ದರ ಪ್ರಮಾಣೀಕರಣದ ಬಗ್ಗೆ ಗಮನವಿಡಲು ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ತನಿಖಾಧಿಕಾರಿಯಾಗಿ ನೇಮಿಸುವುದು.

5. ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ವಿತರಣೆಯ ಸಮಯದಲ್ಲಿನ ಹಾಜರಾತಿಯ ಬಗ್ಗೆ ಮತ್ತು ಉದ್ದೇಶಿತ ಫಲಾನುಭವಿಗಳು ಆಹಾರವನ್ನು ಅಂತಿಮವಾಗಿ ಉಪಯೋಗಿಸುವ ಬಗ್ಗೆ ತನಿಖೆ ಮಾಡುವುದು.

6. ಆಗ್ರೋ ಕಾರ್ನ್ ಸಂಸ್ಥೆಯು ಐಸಿಡಿಎಸ್ ಯೋಜನೆಗಳಿಗೆ ಶಕ್ತಿಯುತ ಆಹಾರವನ್ನು ಮತ್ತು ಶಕ್ತಿಯುತ ಆಹಾರ ಮಿಶ್ರಣ ಪೂರೈಕೆಯನ್ನು ಅಸಮರ್ಪಕವಾಗಿ ಮಾಡಿ ಲೋಪವೆಸಗಿರುವ ಬಗ್ಗೆ ಪೂರೈಕೆ ಮಾಡಿದ ಶಕ್ತಿಯುತ ಆಹಾರ ಮತ್ತು ಶಕ್ತಿಯುತ ಆಹಾರ ಮಿಶ್ರಣಗಳಲ್ಲಿನ ಗುಣಮಟ್ಟದ ಅಕ್ರಮಗಳ ಬಗ್ಗೆ ತನಿಖೆ ಮಾಡುವುದು ಮತ್ತು ಆಗ್ರೋ ಕಾರ್ನ್ ಸಂಸ್ಥೆಯು ಮತ್ತು ಖಾಸಗಿ ಗಿರಣಿಗಳವರು ಪಡಿತರ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿರುವರೆಂಬ ಆಪಾದನೆಯ ಬಗ್ಗೆಯೂ ತನಿಖೆ ಮಾಡುವುದು.

7. ಈ ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವುದು.

ಈ. ಇದು ಪ್ರಾರಂಭಿಕ ವರದಿಯಾಗಿರುತ್ತದೆ.

ಉ. 1. ನಂದಿ ಅಗ್ರೋ ಪ್ರೈವೈಟ್ ಲಿಮಿಟೆಡ್, ಕೋಲಾರ ಇವರಿಗೆ ಫೆಬ್ರವರಿ 1997ರಿಂದ ಈಚೆಗೆ ಎಲ್ಲಾ ಪಡಿತರ ಗೋಧಿ ಹಂಚಿಕೆಯನ್ನು ನಿಲ್ಲಿಸಲಾಗಿದೆ.

2) ನಂದಿ ಅಗ್ರೋ, ಕೋಲಾರ ಇವರಿಗೆ ಪಾವತಿ ಮಾಡಲಾದ ಅಧಿಕ ಮೊತ್ತ ರೂ. 33 ಲಕ್ಷಗಳನ್ನು ಈಗಾಗಲೇ ವಸೂಲಿ ಮಾಡಲಾಗಿದೆ.

3) ಐಸಿಡಿಎಸ್ ಯೋಜನೆಗಳಲ್ಲಿ ಖರೀದಿ ಪದ್ದತಿಯನ್ನು ಸುಧಾರಿಸುವ ಪ್ರಸ್ತಾವನೆಯ ಸರ್ಕಾರದ ಪರಿಶೀಲನೆಯಲ್ಲಿದೆ.

4) ಅಂಗನವಾಡಿ ಕೇಂದ್ರಗಳಲ್ಲಿ ಹಾಜರಾತಿಯನ್ನು ಮತ್ತು ಆಹಾರ ವಿತರಣೆಯನ್ನು ಪರಿಶೀಲಿಸುವ ಸಲುವಾಗಿ ತನಿಖೆ ನಡೆಸಲು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಬೇಕೆಂದು ಕೋರಿ ದಿನಾಂಕ : 29.1.97ರಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಪತ್ರ ಬರೆಯಲಾಗಿದೆ ಈ ಬಗ್ಗೆ 17 ಜಿಲ್ಲೆಗಳಿಂದ ವರದಿಗಳು ಬಂದಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ಸಮರ್ಪಕವಾಗಿ ಹಾಜರಾತಿ ಹಾಕಲಾಗುತ್ತದೆಯಂದು ತಿಳಿಸಲಾಗಿದೆ.

5) ಅಗ್ರೋ ಕಾರ್ನ್ ಪ್ರೊಡೆಕ್ಟ್ಸ್ ಲಿ, ನ ವ್ಯವಹಾರಗಳಲ್ಲಿ ಅಕ್ರಮವೆಸಗಿರುವ ಬಗ್ಗೆ ಅಗ್ರೋ ಕಾರ್ನ್ ಪ್ರೈವೆಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಶಿಸ್ತು ಕ್ರಮ

ಕೈಗೊಳ್ಳಲು ದಿನಾಂಕ: 3-8-97ರಂದು ಕೃಷಿ ಮತ್ತು ತೋಟಗಾರಿಕೆ ಇಲಾಖೆಯನ್ನು ಕೋರಲಾಗಿದೆ.

6) ತನಿಖಾ ವರದಿಯಲ್ಲಿ ಕಂಡು ಬಂದ ಅಂಶಗಳನ್ನು ಕಾರ್ಯದರ್ಶಿಗಳು ಕೃಷಿ ಇಲಾಖೆ ಇವರಿಗೆ ಮುಂದಿನ ಕ್ರಮ ತೆಗೆದುಕೊಳ್ಳುವ ಸಲುವಾಗಿ ಗಮನಕ್ಕೆ ತರಲಾಗಿದೆ.

7) ಆಹಾರ ಸರಬರಾಜಿನ ಬಗ್ಗೆ ಅಗ್ರೋ ಕಾರ್ನ್ ಸಂಸ್ಥೆಯೊಂದಿಗೆ ಕರಾರನ್ನು ಮಾಡಿಕೊಳ್ಳಲು ಹಾಗೂ ಕರಾರಿನ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಸದರಿ ಸಂಸ್ಥೆಗೆ ಜುಲ್ಮಾನೆ ವಿಧಿಸಲು ಅವಕಾಶ ನೀಡುವ ಒಂದು ಕಾಲಂನ್ನು ಕರಾರಿನಲ್ಲಿ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿತ್ತು.

8) ನಂದಿ ಅಗ್ರೋ ಸಂಸ್ಥೆಯಿಂದ ರವೆಯನ್ನು ಖರೀದಿಸಲು ಜಿಲ್ಲಾ ಪಂಚಾಯತ್, ಕೋಲಾರ ಮತ್ತು ಮೈಸೂರು ಇವರು ತಮ್ಮ ಖರೀದಿ ಸಮಿತಿಯಲ್ಲಿ ನಿರ್ಣಯ ತೆಗೆದುಕೊಂಡಿರುವ ಬಗ್ಗೆ ಮತ್ತು ಇದರಲ್ಲಿ ಸರ್ಕಾರೇತರ ಸದಸ್ಯರು ಭಾಗಿಯಾಗಿರುವುದರಿಂದ ಈ ಬಗ್ಗೆ ತನಿಖೆ ನಡೆಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯನ್ನು ಕೋರಲಾಗಿದೆ.

9) ಐ.ಸಿ.ಡಿ.ಎಸ್. ಅವ್ಯವಹಾರದಲ್ಲಿ ಭಾಗಿಯಾಗಿರುವುದಾಗಿ ಪಟ್ಟಿಮಾಡಿರುವ ಅಧಿಕಾರಿಗಳಲ್ಲಿ ಪ್ರಥಮ ದರ್ಜೆ ಸಹಾಯಕರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಅಧಿಕಾರ ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಇರುತ್ತದೆ. ಆದ್ದರಿಂದ ಈ ಬಗ್ಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದ 4 ಇಲಾಖಾ ಅಧಿಕಾರಿಗಳಿಗೆ ಷೋಕಾಸ್ ನೋಟೀಸ್ ಜಾರಿ ಮಾಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಆಯಾ ಇಲಾಖೆಗಳನ್ನು ಕೋರಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ ಶ್ರೀ ಬಿ.ಎಸ್. ಆಗವಾನೆಯವರ ವರದಿಯಲ್ಲಿರುವ ಅಂಶವನ್ನು ಕೂಡ ಕೊಟ್ಟಿದ್ದಾರೆ. ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರೆ, ಆ ವರದಿಯನ್ನು ಸದನಕ್ಕೆ ಮಂಡಿಸತಕ್ಕಂಥ ಉದ್ದೇಶವಿದೆಯೇ? ಇದ್ದರೆ, ಆ ವರದಿಯನ್ನು ಸದನಕ್ಕೆ ಯಾವಾಗ ಕೊಡುತ್ತೀರಿ ಎಂದು ಅದನ್ನು ನಾನು ಕೇಳುತ್ತಿದ್ದೇನೆ, ಇದೆಯೋ ಇಲ್ಲವೊ ಎನ್ನುವುದನ್ನು ಅವರು ಹೇಳಬೇಕು. ಮತ್ತೆ ಐಸಿಡಿಎಸ್ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಪ್ರತ್ಯೇಕವಾಗಿ ಆಹಾರಧಾನ್ಯಗಳು ಸರಬರಾಜಾಗತಕ್ಕಂಥದ್ದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಆ ಆಹಾರ ಪದಾರ್ಥಗಳನ್ನು ಯಾರಿಗೆ ವಿತರಣೆ ಮಾಡುತ್ತಿದ್ದೀರಿ, ತಾವು ಕೊಟ್ಟಿರುವ ಉತ್ತರದ ಆರನೇ ಅಂಶದಲ್ಲಿ ಕೊಟ್ಟಿರುವ ಆ ವರದಿಯಲ್ಲಿ ಯಾರ್ಯಾರ ಮೇಲೆ ಕ್ರಮ

ತೆಗೆದುಕೊಳ್ಳಬೇಕೆನ್ನುವುದನ್ನು ಹೇಳಿದ್ದಾರೆ. ಅದರಲ್ಲಿ, ಆಗ್ರೋ ಕಾರ್ನ್ ಸಂಸ್ಥೆಯು ಐಸಿಡಿಎಸ್ ಯೋಜನೆಗಳಿಗೆ ಶಕ್ತಿಯುತ ಆಹಾರವನ್ನು ಮತ್ತು ಶಕ್ತಿಯುತ ಆಹಾರ ಮಿಶ್ರಣ ಪೂರೈಕೆಯನ್ನು ಅಸಮರ್ಪಕವಾಗಿ ಮಾಡಿ ಲೋಪವೆಸಗಿರುವ ಬಗ್ಗೆ ಪೂರೈಕೆ ಮಾಡಿದ ಶಕ್ತಿಯುತ ಆಹಾರ ಮತ್ತು ಶಕ್ತಿಯುತ ಆಹಾರ ಮಿಶ್ರಣಗಳಲ್ಲಿನ ಗುಣಮಟ್ಟದ ಅಕ್ರಮಗಳ ಬಗ್ಗೆ ತನಿಖೆ ಮಾಡುವುದು ಮತ್ತು .....

ಅಧ್ಯಕ್ಷರು : ಅದನ್ನೆಲ್ಲಾ ಏತಕ್ಕೆ ಓದುತ್ತೀರಿ. Please come to the Question. Why are you reading? Specify your question.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಅ) ಉತ್ತರದಲ್ಲಿರುವುದಕ್ಕೆ ನಾನು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. (ಆ) ಉತ್ತರದಲ್ಲಿ ಯಾವ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ನಾನು ಕೇಳುತ್ತಿರತಕ್ಕಂಥದ್ದು, ಆಗ್ರೋ ಕಾರ್ನ್ ಬಗ್ಗೆ ಹೇಗೆ ತನಿಖೆ ಮಾಡಲು ಉದ್ದೇಶಿಸಿದ್ದೀರಿ, ಯಾವಾಗ ಮಾಡುತ್ತೀರಿ ಮತ್ತು ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿರುವ ಅಧಿಕಾರಿಗಳಪಟ್ಟಿ ಇದೆ ಎಂದು ಹೇಳಿದ್ದೀರಿ, ಆ ಪಟ್ಟಿಯಲ್ಲಿರುವ ಯಾರ ಹೆಸರನ್ನು ಹೇಳುವುದಕ್ಕೆ ಸಾಧ್ಯವಿದೆ ಮತ್ತು ಉಳಿದ ನಾಲ್ಕು ಇಲಾಖಾ ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ಅನ್ನು ನೀಡಲಾಗಿದೆ ಎಂದು ತಿಳಿಸಿದ್ದೀರಿ. ಯಾರು ಆ ನಾಲ್ಕು ಜನ ಇಲಾಖಾ ಅಧಿಕಾರಿಗಳು?

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ನಾವು ನಾವೇ ಮಾತನಾಡಿಕೊಳ್ಳೋಣ. ನೀವು ಒಂದೇ ಸಾರಿ ಏಳು, ಎಂಟು ಉಪ ಪ್ರಶ್ನೆಗಳನ್ನು ಕೇಳಿದರೆ ಯಾರೇ ಮಂತ್ರಿ ಹೇಗೆ ಉತ್ತರ ಹೇಳುತ್ತಾರೆ? Put one or two supplementaries. Then you will get another chance. In a row, if you put 7-8 supplementaries, how can she answer?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇನ್ನೊಂದು ಸಾರಿ ಕೇಳಿದರೆ, ನೀವು, ಎಷ್ಟು ಸಾರಿ ಹೇಳುವುದು ಎಂದು ಹೇಳುತ್ತೀರಿ, ಅದಕ್ಕೆ ಏನು ಮಾಡುವುದು?

Mr. Speaker : You have completed 2 years and 8 months in this Assembly. You should all remember this. ಮಂತ್ರಿಗಳೇ, ತಾವು ಉತ್ತರವನ್ನು ಹೇಳಿ, ಮಾಧುಸ್ವಾಮಿಯವರೇ ಒಂದು ನಿಮಿಷ ಇರಿ,

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಉತ್ತರ ನಮಗೆ ಬರಬೇಕೋ ಬೇಡವೊ ಎನ್ನುವುದನ್ನು ತಾವು ಹೇಳಬೇಕು. ತಡೆಹಿಡಿಯಲಾದ ಪ್ರಶ್ನೆಯನ್ನು ಯಾರಾದರೂ ಸದಸ್ಯರು ಹೇಳಿದರೆ, ಬೇರೆ ಸದಸ್ಯರಿಗೂ ಕೂಡ .....

ಅಧ್ಯಕ್ಷರು : ಅದಕ್ಕೆ ನನಗೆ ಮಂತ್ರಿಗಳು ಒಂದು ಪತ್ರವನ್ನೇ ಬರೆದುಕಳುಹಿಸಿದ್ದಾರೆ, ಅದು ನನಗೆ ತಲುಪಿತು, ಸ್ವಲ್ಪ ಸಮಯ ಕಡಿಮೆ ಇದ್ದದ್ದರಿಂದ ಉತ್ತರವನ್ನು ಅವರಿಗೆ ಕಳುಹಿಸಿಕೊಟ್ಟಿದ್ದೇನೆ, ಉಳಿದವರಿಗೆ ಕಳುಹಿಸಿಕೊಡುತ್ತೇನೆಂದು ಅವರು ಪತ್ರವನ್ನು ಬರೆದು ಕಳುಹಿಸಿಕೊಟ್ಟಿದ್ದಾರೆ, ಅದನ್ನು ಓದುತ್ತೇನೆ ಕೇಳಿ. ಸನ್ಮಾನ್ಯ ಸಭಾಧ್ಯಕ್ಷರಿಗೆ ತಿಳಿಸುವುದೇನೆಂದರೆ, ವಿಧಾನಸಭೆಯ ಕಾರ್ಯಸೂಚಿಯು

ಈದಿನ ಬೆಳಿಗ್ಗೆ ಅಂದರೆ 29-8-97ರಂದು ಬಂದಿರುವುದರಿಂದ ಆ ಪ್ರಶ್ನೆ ಪಟ್ಟಿಯಲ್ಲಿ ಸೇರಿದೆ. ಆದುದರಿಂದ ಈಗ ಕೆಲವು ಉತ್ತರದ ಪ್ರತಿಗಳನ್ನು ಸಲ್ಲಿಸಿದ್ದೇವೆ, ಇನ್ನು ಉಳಿದ ಪ್ರತಿಗಳನ್ನು ಸ್ವಲ್ಪ ಸಮಯದಲ್ಲಿ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ, They have not gone by default.

ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್ : ಮಾನ್ಯ ಸಭಾಧ್ಯಕ್ಷರೆ, ಅಗ್ರೋ ಕಾರ್ನ್ ಸಂಸ್ಥೆಯಿಂದ ನಾವು ತರತಕ್ಕಂಥ ಗೋಧಿಯ ಬಗ್ಗೆ ಕೃಷಿ ಇಲಾಖೆಗೆ ನಾವು ವರದಿಯನ್ನು ಸಲ್ಲಿಸಿದ್ದೇವೆ, ಆದರಲ್ಲಿ ಏನಾದರೂ ಅವ್ಯವಹಾರವಾಗಿದ್ದರೆ ಕೃಷಿ ಇಲಾಖೆಯವರ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ಮತ್ತು ನಮ್ಮ ಐಸಿಡಿಎಸ್ ಸ್ಕೀಂನಲ್ಲಿ ಪಡಿತರಗೋಧಿ ಮಾತ್ರ ಕೇಂದ್ರ ಸರ್ಕಾರದಿಂದ ನಮಗೆ ಸಿಗುತ್ತದೆ.

Mr. Speaker : Please ask what your other questions, one by one.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ವರದಿಯನ್ನೇನಾದರೂ ಸದನದಲ್ಲಿ ಮಂಡಿಸತಕ್ಕಂತಹ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದರೆ ಅದನ್ನು ಯಾವಾಗ ಮಂಡಿಸುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್: ಮಾನ್ಯ ಅಧ್ಯಕ್ಷರೇ, ಆ ವರದಿಯನ್ನು ಸದನದ ಮುಂದೆ ಇಡಬಹುದೆಂದು ನಾನು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಶಿಸ್ತು ಕ್ರಮ ತೆಗೆದುಕೊಳ್ಳುವ ಸಲುವಾಗಿ ಕೆಲವೊಂದು ಹೆಸರುಗಳನ್ನು ಪಟ್ಟಿ ಮಾಡಿದ್ದೀರಿ ಆ ಹೆಸರುಗಳನ್ನು ತಿಳಿಸಲಿಕ್ಕೆ ಸಾಧ್ಯವಿದೆಯೇ?

ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್ : ಆ ಬಗ್ಗೆ ತಮಗೆ ಮಾಹಿತಿ ತರಿಸಿಕೊಡುತ್ತೇನೆ.

MR. SPEAKER : She will reveal. There is nothing to conceal.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ವಿಷಯ ಸಮಿತಿಯು ವರದಿ ಕೊಟ್ಟ ನಂತರ ಅದನ್ನು ಪರಿಶೀಲಿಸಲು ಶ್ರೀ ಅಗವಾನಿ ಎಂಬ ಅಧಿಕಾರಿ ನೇತೃತ್ವದಲ್ಲಿ ಸಮಿತಿಯೊಂದನ್ನು ಸರ್ಕಾರ ರಚಿಸಿತು. ಅವರೂ ಕೂಡ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಅವರು ಸಾಕಷ್ಟು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅವರು ಮಾಡಿರುವ ಶಿಫಾರಸ್ಸುಗಳ ಮೇಲೆ ತಾವೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಆದರೆ ಆಗ ಆ ವರದಿಯಲ್ಲಿ ರಿಪೋರ್ಟ್ ಆಗಿದ್ದು ಏನೆಂದರೆ, ಬಹಳಷ್ಟು ಐ.ಎ.ಎಸ್. ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ, 25 ಕೋಟಿ ರೂ.ಗಳಿಗೂ ಹೆಚ್ಚು ಅವ್ಯವಹಾರ ಇದರಲ್ಲಿ ನಡೆದಿದೆ ಎಂದು ಆ ವರದಿಯಲ್ಲಿ ಹೇಳಲಾಗಿದೆ. ಈ ಬಗ್ಗೆ ಪ್ರತಿಕೆಗಳಲ್ಲೂ ಸಹ ಬಂದಿತ್ತು. ಆದರೆ ಈ ಪ್ರಕರಣದಲ್ಲಿ ನೀವು ಯಾರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಿ ಎಂದರೆ, ಯಾರೋ ಒಬ್ಬ ಗುಮಾಸ್ತನಿಗೆ ನೋಟೀಸ್ ಕೊಟ್ಟಿದ್ದಾರೆ, ಇನ್ನುಳಿದ 4-5 ಜನರ ಮೇಲೆ ಅಷ್ಟೇ ಕ್ರಮ ಜರುಗಿಸಲಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ವರದಿಯಾಗಿರುವುದಕ್ಕೂ ಶಿಸ್ತಿನ ಕ್ರಮ ಜರುಗಿಸಿರುವುದಕ್ಕೂ ಬಹಳ ವ್ಯತ್ಯಾಸ ಇದೆ. ಐ.ಎ.ಎಸ್

ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬಾರದೆಂದು ಸರ್ಕಾರ ತೀರ್ಮಾನಿಸಿದೆಯೇ? ಅವರಲ್ಲಿ ಯಾರಾದರೂ ಇನ್‌ವಾಲ್ವ್ ಆಗಿದ್ದಾರೆಯೇ ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ 3-4 ಇಲಾಖೆಗಳು ಸೇರಿಕೊಂಡಿವೆ. ಮೊದಲು ಈ ಬಗ್ಗೆ ವಿಷಯ ಸಮಿತಿಯ ವರದಿ ಕೊಟ್ಟಮೇಲೆ ಶ್ರೀ ಅಗವಾನಿ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದ್ದು ಅವರೂ ಕೂಡ ವರದಿಯನ್ನು ಕೊಟ್ಟಿದ್ದಾರೆ. ಅದೊಂದು ಪ್ರಾರಂಭಿಕವಾದಂತಹ ವರದಿಯಾಗಿರುವುದರಿಂದ ಈಗ ಸದನದಲ್ಲಿ ಕೊಟ್ಟಿಲ್ಲ, ನಂತರ ಕೊಡುತ್ತೇವೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ಆಗ್ರೋ ಕಾರ್ನ್ ಪ್ರಾಡಕ್ಟ್ಸ್‌ನವರಿಗೆ ಏಕಸ್ವಾಮ್ಯತ್ವವನ್ನು ಕೊಟ್ಟಿದ್ದರಿಂದ ಅವರು ನಿಗದಿಯಾದಂತಹ ವೇಳೆಯಲ್ಲಿ ಅದನ್ನು ಸಪ್ಲೈ ಮಾಡಲಿಲ್ಲ ಎನ್ನತಕ್ಕಂಥ ಒಂದು ಕಾರಣ ಇದೆ. ಆ ಕಾರಣ ಇದ್ದುದರಿಂದ ಇಡೀ ಖಾಸಗಿಯಾಗಿರತಕ್ಕಂತಹ ನಂದಿ ಫುಡ್ ಪ್ರಾಡಕ್ಟ್ಸ್ ಮೊದಲಾದಂತಹವರಿಗೆ ಕೊಡಬೇಕೆಂದು ಆಗ ನಿರ್ಣಯ ಮಾಡಿರತಕ್ಕಾಂಥದರಲ್ಲಿ 9 1/2ರೂ. ಒಂದು ಕೆ.ಜಿಗೆ ಎಂದು ನಿಗದಿ ಮಾಡಿ, ಅದು 7 ರೂ.ಗೆ ಸಾಧ್ಯತೆ ಆಗುತ್ತದೆ ಎನ್ನುವುದೊಂದು ಪ್ರಶ್ನೆ ಈಗ ಬಂದಿದೆ. ಎರಡನೆಯದಾಗಿ, ಅಲ್ಲಿ ಕೊಟ್ಟಿರತಕ್ಕಂತಹ ಗೋಧಿ, ಅದರ ನುಚ್ಚು ಮತ್ತು ಹಿಟ್ಟು ಇವುಗಳನ್ನು ಕೂಡ ವಾಪಸ್ ತೆಗೆದುಕೊಳ್ಳಬೇಕಾಗಿತ್ತು. ವಾಪಸ್ ತೆಗೆದುಕೊಂಡಿಲ್ಲ ಎನ್ನುವಂತಾದ್ದು ಇದೆ. ಶಕ್ತಿಯುತ ಆಹಾರಕ್ಕೆ ಸಂಬಂಧಪಟ್ಟಂತೆ ಕೊಟ್ಟ ನಂತರ, ಬರೀ ಅಷ್ಟನ್ನು ಮಾತ್ರ ಅವರು ಕೊಟ್ಟಿದ್ದಾರೆ ಎನ್ನುವಂತಹ ವಿಚಾರದಲ್ಲಿ ಈಗಾಗಲೇ 30 ಲಕ್ಷ ರೂ. ಗಳನ್ನು ಆಗ್ರೋ ಕಾರ್ನ್‌ಪ್ರಾಡಕ್ಟ್ಸ್‌ನವರು ಈ ನಂದಿ ಫುಡ್ ಪ್ರಾಡಕ್ಟ್ಸ್‌ನಿಂದ ವಸೂಲಾತಿ ಮಾಡಿದ್ದಾರೆ. ವಸೂಲಾತಿ 30 ಲಕ್ಷ ರೂ.ಗಳನ್ನು ಮಾಡಿದ್ದೇವೆ ಅಂದಾಕ್ಷಣ ಅವರು ತಪ್ಪುಗಳನ್ನು ಕೈ ಬಿಡಬೇಕು ಎಂದೇನೂ ಇಲ್ಲ. ಆದರೆ ಹಣವನ್ನು ವಸೂಲಿ ಮಾಡತಕ್ಕದ್ದೂ ಕೂಡ ಆ ಕ್ರಮಗಳಲ್ಲಿ ಒಂದಾಗಿತ್ತು. ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇಂತಹ ಖರೀದಿಗಳಲ್ಲಿ ಅವ್ಯವಹಾರ ಆಗಿದೆ ಎನ್ನುವಂತಹ ಸಂದರ್ಭದಲ್ಲಿ ಇಲಾಖಾ ವತಿಯಿಂದ ಇಂತಿಷ್ಟೇ ನಿಗದಿತವಾದಂತಹ ದರದಲ್ಲೇ ಖರೀದಿ ಮಾಡಬೇಕೆನ್ನುವಂತಹ ಸುತ್ತೋಲೆ ಹೋಗಿಲ್ಲ. ಅದಕ್ಕೆ ಯಾರು ಕಾರಣರು ಎಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಈಗಾಗಲೇ ಅದರ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಈಗ ಪರ್ಚೇಸ್ ಕಮಿಟಿಯಲ್ಲಿ ಜಿಲ್ಲಾ ಪಂಚಾಯತ್‌ಗಳ ಕೋಲಾರ ಜಿಲ್ಲಾ ಪಂಚಾಯಿತಿ ಹಾಗೂ ಮೈಸೂರು ಜಿಲ್ಲಾ ಪಂಚಾಯಿತಿಯವರು ನಿಗದಿತವಾಗಿರತಕ್ಕಂತಹ ದರದ ಒಂದು ಸುತ್ತೋಲೆ ಸಂಬಂಧಪಟ್ಟಂತಹ ಇಲಾಖೆಯಿಂದ ಬಂದಿಲ್ಲದ್ದರಿಂದ ನಾವು ಅದರ ಶಿಫಾರಸ್ಸಿನ ಮೇಲೆ ಖರೀದಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಎರಡೂವರೆ ಲಕ್ಷ ರೂ.ಗಳ ಮೈಸೂರು ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಂತೆ ಇದರಿಂದ ಹೆಚ್ಚುವರಿ ಹಣ ಜಿಲ್ಲಾ ಪಂಚಾಯಿತಿಗೆ ಬಂದಿದೆ ಎನ್ನುವಂತಹ ಮಾತು ಇದೆ. ಕೋಲಾರದಲ್ಲಿಯಾದರೂ ಸುಮಾರು 30-40 ಲಕ್ಷ ರೂ.ಗಳವರೆಗೆ ಬರುತ್ತದೆ ಎನ್ನತಕ್ಕದ್ದು ಇದೆ. ಇವುಗಳ ಬಗ್ಗೆ ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವಹಿಸಿ ಕೊಟ್ಟಿದ್ದಾರೆ. ನಾವು ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಂತಹ ಅಧಿಕಾರಿಗೆ ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ. ಅವರಿಂದ ಪ್ರಾರಂಭಿಕವಾದಂತಹ ಸಮಜಾಯಿಷಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಉಳಿದಂತೆ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಅಧಿಕಾರಿಗಳು ಐ.ಎ.ಎಸ್ ಆಗಿದ್ದರೇನು ಅಥವಾ ಇನ್ನಾರಾದರೂ ಆಗಿದ್ದರೇನು? ಎಲ್ಲರ ಮೇಲೂ ಕ್ರಮ ಕೈಗೊಳ್ಳಿ. ಐ.ಎ.ಎಸ್ ಅಧಿಕಾರಿಗಳು ಎಂದರೆ ತಲೆಯ ಮೇಲೆ ಕೊಂಬು ಏನಾದರೂ ಇಟ್ಟುಕೊಂಡಿರುತ್ತಾರೆಯೇ? ಯಾರ್ಯಾರು ತಪ್ಪು ಮಾಡುತ್ತಾರೋ ಅವರಿಗೆಲ್ಲಾ ಶಿಕ್ಷೆ ಆಗಬೇಕು. ದೇಶದ ಪ್ರಧಾನಿಗಳಾಗಿದ್ದವರೇ ಇವತ್ತು ನ್ಯಾಯಾಲಯದ ಕಟಕಟೆಯಲ್ಲಿ ನಿಂತಿರುವಾಗ ಐ.ಎ.ಎಸ್ ಅಧಿಕಾರಿಗಳೇನು ವಿಶೇಷ? ಐ.ಎ.ಎಸ್ ಆಗಿರಲಿ ಅಥವಾ ಐ.ಪಿ.ಎಸ್ ಅಧಿಕಾರಿಯಾಗಿರಲೀ, ತಪ್ಪು ಮಾಡಿದ್ದರೆ ಎಲ್ಲರೂ ಕ್ರಮವನ್ನು ಎದುರಿಸಲೇಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಐ.ಎ.ಎಸ್ ಅಧಿಕಾರಿಗಳಾಗಿರುವ ಕೆಲವು ಜಿಲ್ಲಾಧಿಕಾರಿಗಳೂ ಕೂಡ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಅವರ ಮೇಲೂ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೇ, ಅದಕ್ಕೇ ನಾನು ಹೇಳುವುದು, ಆ ರೀತಿ ಐ.ಎ.ಎಸ್ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಿ ಎಂದು ಕೇಳಿ ಅವರನ್ನು ಸ್ಪೆಷಲ್ ಆಗಿ ಟ್ರೀಟ್ ಮಾಡುವುದಕ್ಕೆ ಹೋಗಬೇಡಿ. Anybody who violates the law, who commits the offence is punishable. The law of land is uniformally appplicable to all whether he is IAS or IPS or Prime Minister of this country. Why should we try to give them special feeling that they are something who cannot be touched. They are also liable for action if the report is there against them. Nothing to worry about it.

ಶ್ರೀ ಟಿ.ಬಿ. ಜಯಚಂದ್ರ : ಅವರ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರದವರು ಏಕೋ ಹಿಂಜರಿಯುವಂತೆ ಕಾಣುತ್ತಿದೆ. ಅದಕ್ಕೋಸ್ಕರ ನಾನು ಆ ರೀತಿ ಹೇಳಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ತಾವು law equally applies to all. ಎಂದು ಹೇಳುತ್ತೀರಲ್ಲಾ, ನಾನು ನಿಮಗೆ ಬೇಕಾದರೆ ಎರಡು-ಮೂರು ಉದಾಹರಣೆಗಳನ್ನು ಕೊಡುತ್ತೇನೆ. ತಳಮಟ್ಟದ ಅಧಿಕಾರಿಗಳಿಗೆ ಶಿಕ್ಷೆ ಕೊಡುತ್ತಾರೆ. ಮೇಲೆ ಐ.ಎ.ಎಸ್ ಅಧಿಕಾರಿ ಇದ್ದರೆ ಅವನೊಬ್ಬನನ್ನು ಬಿಟ್ಟಿರುತ್ತಾರೆ.

ಅಧ್ಯಕ್ಷರು : ಸ್ಪೆಸಿಫೈ ಮಾಡಿ ಹೇಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಹೌಸಿಂಗ್ ಬೋರ್ಡ್‌ನಲ್ಲಿ ಯಾರ್ಯಾರನ್ನೋ ಸಸ್ಪೆಂಡ್ ಮಾಡಿದ್ದೀರಿ. You have left out the Commissioner. What about the Ashraya scheme? ಅದೇ ರೀತಿ ಆಶ್ರಯ ಸ್ಕೀಮ್‌ನಲ್ಲಿ ಕೆಳಗಿನ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. The IAS Officer is left out. Somehow you are treating like that.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, All are equal in the eyes of law, But, some are more ಎನ್ನುವಂತಾದ್ದು ಏನಿದೆ, ಅದು ನಿಜವೇ ಯಾರು ಬಲಯುತವಾಗಿರುತ್ತಾರೆ, ಪ್ರಭಾವಶಾಲಿಗಳಾಗಿರುತ್ತಾರೋ ಅವರು ಯಾವಾಗಲೂ ಕಾನೂನಿನ ಮೇಲೆ ಸವಾರಿ ಮಾಡುತ್ತಾರೆ.

ಅವರು ಬಹುಶಃ ಜಾಣರಾಗಿದ್ದಾರೆ, ಅವರು ತಪ್ಪಿಸಿಕೊಳ್ಳುತ್ತಾರಲ್ಲಾ ಎನ್ನುವಂತದ್ದು ಪ್ರಾಯಶಃ ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಪ್ರಶ್ನೆ ಇರಬಹುದು. ಖಂಡಿತವಾಗಿಯೂ ಯಾರನ್ನೂ ಇದರಲ್ಲಿ ನಾವು ಉಳಿಸುವಂತಹ ಪ್ರಯತ್ನ ಮಾಡುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಒಂದು ಸ್ಪೇರ್‌ಕೇಸ್ ಅನ್ನು ಕೆಳಗಡೆಯಿಂದ ಗುಡಿಸುವುದಕ್ಕಾಗುವುದಿಲ್ಲ, ಮೇಲುಗಡೆಯಿಂದಲೇ ಗುಡಿಸಿಕೊಂಡು ಬರಬೇಕು. ಇದು ಸರ್ಕಾರದ ಗಮನದಲ್ಲಿ ಇರಲಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಬೀಚಿಯವರು ಒಂದು ಸಲ ಹೇಳಿದ್ದರು, ಗೋಪುರವನ್ನು ಹೇಗೆ ಕಟ್ಟಿದ್ದೀರಿ ನೀವು ಅಂದರೆ, ಅದೇನು ಬಹಳ ಸುಲಭವಾದುದು, ಮೇಲಿನಿಂದ ಕಟ್ಟಿಕೊಂಡು ಬಂದು ಕೆಳಗಿಳಿದು ಹೋದೆವು ಎಂದು ಹಾಗೇ ಆಗುತ್ತದೆ.

SRI S. SURESH KUMAR : It is cleaning the system, not building the system.

SRI M.P. PRAKASH : I know that.

ರೆವಿನ್ಯೂ ಭೂಮಿ ನೋಂದಾವಣೆ

571 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟ 5 ಗುಂಟೆಗಿಂತ ಕಡಿಮೆ ಇರುವ ರೆವಿನ್ಯೂ ಭೂಮಿ ನೋಂದಾವಣೆಯಾಗದೆ ಮನೆ ಕಟ್ಟಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ವ್ಯವಸಾಯಗಾರರು 0-5 ಗುಂಟೆಗಿಂತ ಕಡಿಮೆ ಇರುವ ರೆವಿನ್ಯೂ ಭೂಮಿಯನ್ನು ಗ್ರಾಮಾಂತರ ಪ್ರದೇಶದಲ್ಲಿ ನೋಂದಾಯಿಸಿಕೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ. ನಿಯಮಾನುಸಾರ ಭೂಪರಿವರ್ತನೆಯಾದ ಭೂಮಿಯಿಂದ ನಿರ್ಮಿಸಿದ ನಿವೇಶನಗಳ ಬಡಾವಣೆಗಳ ಮತ್ತು ಅಧಿಕೃತ ಗ್ರಾಮಠಾಣ ನಿವೇಶನಗಳಿಗೆ ಸಂಬಂಧಪಟ್ಟಂತೆ ದಸ್ತಾವೇಜುಗಳ ನೋಂದಾವಣೆಯನ್ನು ನಿಷೇಧಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.